# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1696 |
| ಮಾನ್ಯ ಸದಸ್ಯರ ಹೆಸರು | ಶ್ರೀ ಚಿದಾನಂದ ಎಂ. ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸ್ವಾಮಿತ್ವ ಯೋಜನೆ ಎಂದರೇನು; ಇದರ ಉದ್ದೇಶವೇನು; (ಸಂಪೂರ್ಣ ವಿವರ ನೀಡುವುದು) ಗ್ರಾಮಠಾಣಾ ವ್ಯಾಪ್ತಿಯ ಆಸ್ತಿ ಮಾಲೀಕರಿಗೆ ಸ್ವಾಮಿತ್ವ ಯೋಜನೆಯಿಂದ ಆಗುವ ಪ್ರಯೋಜನೆಗಳು ಏನು; | ಸ್ವಾಮಿತ್ವ ಯೋಜನೆಯು (SVAMITVA – Survey of Villages and Mapping with Improvised Technology in Village Areas) ಇದುವರೆಗೂ ಅಳತೆಯಾಗದೇ ಇರುವ ಗ್ರಾಮಠಾಣ ಒಳಗಿನ ಆಸ್ತಿಗಳು ಸೇರಿದಂತೆ ಆ ಗ್ರಾಮದಲ್ಲಿನ ಎಲ್ಲಾ ಗ್ರಾಮೀಣ ಜನವಸತಿ ಪ್ರದೇಶಗಳ ಆಸ್ತಿಗಳನ್ನು ಡ್ರೋನ್ ತಂತ್ರಜ್ಞಾನ ಬಳಸಿ ಅಳತೆ ಮಾಡಿ ಡಿಜಿಟಲ್ ರೂಪದಲ್ಲಿ ದಾಖಲೆಗಳನ್ನು ಸಿದ್ಧಪಡಿಸಿ ಆಸ್ತಿ ಮಾಲೀಕರಿಗೆ ಅಧಿಕೃತ ಹಕ್ಕು ದಾಖಲೆ (ಆಸ್ತಿ ಕಾರ್ಡ್) ನೀಡುವ ಯೋಜನೆಯಾಗಿದೆ.<br><u>ಸದರಿ ಯೋಜನೆಯಿಂದ ಆಗುವ ಪ್ರಯೋಜನೆಗಳು :-</u><br>• ಪ್ರಪ್ರಥಮ ಬಾರಿಗೆ ಗ್ರಾಮಠಾಣಾ ಪ್ರದೇಶದ ಆಸ್ತಿಗಳಿಗೆ ಡ್ರೋನ್ ಮೂಲಕ ಅಳತೆ ನಡೆಸಿ, ಡಿಜಿಟಲ್ ಮಾಧ್ಯಮದಲ್ಲಿ ಹಕ್ಕು ದಾಖಲೆಗಳನ್ನು ಸಿದ್ಧಪಡಿಸಿ ಗ್ರಾಮೀಣ ಪ್ರದೇಶದ ಆಸ್ತಿದಾರರಿಗೆ ಸ್ವಾಮಿತ್ವ ಆಸ್ತಿ ಕಾರ್ಡ್ ವಿತರಿಸಲಾಗುತ್ತಿದೆ.<br>• ಗ್ರಾಮಠಾಣಾ ಪ್ರದೇಶದ ಆಸ್ತಿಗಳಿಗೆ ಅಧಿಕೃತ ಹಕ್ಕು ದಾಖಲೆ ನೀಡುವುದರಿಂದ ಆಸ್ತಿಯ ಮೇಲೆ ಬ್ಯಾಂಕುಗಳು ಅಥವಾ ಇತರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಅನುಕೂಲವಾಗುವುದು.<br>• ಗ್ರಾಮೀಣ ಪ್ರದೇಶದ ಆಸ್ತಿಗಳ ನಿಖರವಾದ ನಕ್ಷೆ ಮತ್ತು ಮಾಹಿತಿ ಲಭ್ಯವಾಗುವುದರಿಂದ ಗ್ರಾಮ ಪಂಚಾಯಿತಿಗಳಿಗೆ ತೆರಿಗೆ ಸಂಗ್ರಹಣೆ ಸುಗಮವಾಗುವುದು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ರೂಪಿಸಲು ಸಹಕಾರಿಯಾಗುವುದು.<br>• ಈ ಯೋಜನೆಯಿಂದ ಗ್ರಾಮಠಾಣಾ ವ್ಯಾಪ್ತಿಯ ಆಸ್ತಿ ಮಾಲೀಕರಿಗೆ ಆಸ್ತಿಯ ಮೇಲಿನ ಹಕ್ಕು ದಾಖಲೆ ದೊರೆಯುವುದರಿಂದ ಆರ್ಥಿಕ ಚಟುವಟಿಕೆಗಳಿಗೆ ಹಾಗೂ ಆಸ್ತಿ ನಿರ್ವಹಣೆಗೆ ಹೆಚ್ಚಿನ ಸ್ಪಷ್ಟತೆ ಮತ್ತು ಭದ್ರತೆ ದೊರೆಯುತ್ತದೆ. |

| | | |
|---|---|---|
| ಆ) | ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯ ಗ್ರಾಮಠಾಣಾ ಪ್ರದೇಶಗಳ ಮಾಲೀಕರಿಗೆ ಆಸ್ತಿ ಕಾರ್ಡ್ ನೀಡಲು ಉದ್ದೇಶಿಸಲಾಗಿದೆಯೇ; ಇಲ್ಲದೆ ಇದ್ದಲ್ಲಿ ಅವರು ಅಧಿಕೃತ ದಾಖಲೆಗಳು ಇಲ್ಲದ ಇ-ಆಸ್ತಿ ಪಡೆಯಲು ತೊಂದರೆಯುಂಟಾಗುತ್ತಿದ್ದು ಅವರು ಇ-ಆಸ್ತಿ ಪಡೆಯುವ ಬಗ್ಗೆ ಹೇಗೆ; | ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯೊಳಗಿನ ಆಸ್ತಿಗಳ ನಿರ್ವಹಣೆಯನ್ನು ನಗರಾಭಿವೃದ್ಧಿ ಇಲಾಖೆಯಿಂದ ಮತ್ತು ಗ್ರಾಮಠಾಣ ಪ್ರದೇಶದ ಒಳಗಿನ ಆಸ್ತಿಗಳು ಗ್ರಾಮ ಪಂಚಾಯಿತಿ- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವ್ಯಾಪ್ತಿಯಲ್ಲಿ ನಿರ್ವಹಿಸಲ್ಪಡುತ್ತವೆ. ಭೂಕಂದಾಯ ಅಧಿನಿಯಮ 1964 ಮತ್ತು 1966 ರನ್ವಯ ನಗರ/ ಪಟ್ಟಣಗಳಲ್ಲಿ ಭೂಮಾಪನ ಇಲಾಖೆಯಿಂದ ನಗರಮಾಪನ ಜಾರಿಯಲ್ಲಿದ್ದಲ್ಲಿ ಮಾತ್ರ ಅಂತಹ ಆಸ್ತಿಗಳಿಗೆ ಆಸ್ತಿ ಕಾರ್ಡ್‌ಗಳನ್ನು ನೀಡಲಾಗುತ್ತದೆ. ಪ್ರಸ್ತುತ ಇಲಾಖೆಯಲ್ಲಿ ರಾಜ್ಯದ 48 ನಗರ/ಪಟ್ಟಣಗಳಲ್ಲಿ ಮಾತ್ರ ನಗರ ಮಾಪನ ಜಾರಿಗೊಳಿಸಿ ಆಸ್ತಿ ಕಾರ್ಡ್‌ಗಳು ಜಾರಿಯಲ್ಲಿರುತ್ತವೆ. |
| ಇ) | ಶಿರಾ ತಾಲ್ಲೂಕಿನಲ್ಲಿ "ಸ್ವಾಮಿತ್ವ" ಯೋಜನೆ ಯಡಿಯಲ್ಲಿ ಎಷ್ಟು ಗ್ರಾಮಗಳಲ್ಲಿ ಮತ್ತು ಎಷ್ಟು ಆಸ್ತಿಗಳ ಸಮೀಕ್ಷೆಗಾಗಿ ಡ್ರೋಣ್ ಸರ್ವೇ ಪೂರ್ಣಗೊಳಿಸಲಾಗಿದೆ; ಎಷ್ಟು ಆಸ್ತಿ ಮಾಲೀಕರಿಗೆ ಆಸ್ತಿ ಕಾರ್ಡ್ ನೀಡಲಾಗಿದೆ; ಬಾಕಿಯಿರುವ ಗ್ರಾಮಗಳ ಸಂಖ್ಯೆ ಎಷ್ಟು; ಯಾವ ಕಾಲಮಿತಿಯಲ್ಲಿ ಆಸ್ತಿ ಕಾರ್ಡ್ ನೀಡಲಾಗುವುದು; | ಶಿರಾ ತಾಲ್ಲೂಕಿನಲ್ಲಿ ಒಟ್ಟು 249 ಗ್ರಾಮಗಳಿದ್ದು, ಎಲ್ಲಾ ಗ್ರಾಮಗಳ ಡ್ರೋಣ್ ಸರ್ವೆ ಕಾರ್ಯ ಪೂರ್ಣಗೊಂಡಿರುತ್ತದೆ. ಈ ಪೈಕಿ 62 ಗ್ರಾಮಗಳ ಸ್ಥಳ ಪರಿಶೀಲನೆ ಮಾಡಿ 38 ಗ್ರಾಮಗಳ 9,143 ಆಸ್ತಿಗಳಿಗೆ ಕರಡು ಆಸ್ತಿ ಕಾರ್ಡ್‌ಗಳನ್ನು ಮತ್ತು 17 ಗ್ರಾಮಗಳ 2,320 ಆಸ್ತಿಗಳಿಗೆ ಅಂತಿಮ ಆಸ್ತಿ ಕಾರ್ಡ್‌ಗಳನ್ನು ವಿತರಿಸಲಾಗಿದೆ.<br><br>ತಾಲ್ಲೂಕಿನ ಎಲ್ಲಾ ಗ್ರಾಮಗಳ ಡ್ರೋಣ್ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಈ ಗ್ರಾಮಗಳ ಆಸ್ತಿಗಳಿಗೆ ಆಸ್ತಿ ಕಾರ್ಡ್ ನೀಡಲು ಗ್ರಾಮದ ಪ್ರತಿ ಆಸ್ತಿಗೂ ಭೂಮಾಪನ ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿ ಜಂಟಿಯಾಗಿ ಸ್ಥಳ ಪರಿಶೀಲಿಸಿದ ನಂತರ ಪಂಚಾಯಿತಿ ಅಧಿಕಾರಿಗಳು ನೀಡಲಾಗುವ ಆಸ್ತಿದಾರರ ವಿವರಗಳು (Form-2) ಸ್ವೀಕೃತವಾದ ಕೂಡಲೇ ಕರಡು ಆಸ್ತಿ ಕಾರ್ಡ್‌ಗಳನ್ನು ತಂತ್ರಾಂಶದ ಮೂಲಕ ಸೃಜಿಸಲಾಗುತ್ತದೆ.<br><br>ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಪ್ರಥಮ ಬಾರಿಗೆ ಜಂಟಿ ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಅನುಷ್ಠಾನ ಗೊಳಿಸುತ್ತಿರುವುದರಿಂದ ಹಾಗೂ ಸರ್ವೆ ಆಫ್ ಇಂಡಿಯಾ ಸಂಸ್ಥೆಯ ಸಹಯೋಗದಿಂದ ಅನುಷ್ಠಾನಗೊಳಿಸುತ್ತಿರುವುದರಿಂದ ಈ ಯೋಜನೆಯಲ್ಲಿ ಕಾಲಮಿತಿಯನ್ನು ಏಕಪಕ್ಷೀಯವಾಗಿ ನೀಡಲು ಸಾಧ್ಯವಿರುವುದಿಲ್ಲ. ಆದಷ್ಟು ಶೀಘ್ರವಾಗಿ ಉಳಿದ ಗ್ರಾಮಗಳಿಗೂ ಸಹ ಕರಡು ಆಸ್ತಿ ಕಾರ್ಡ್ ಗಳನ್ನು ವಿತರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ. |
| ಈ) | ಇತ್ತೀಚೆಗೆ ಸರ್ಕಾರ ಇ-ಖಾತಾ ವಿತರಣೆಗೆ ನೋಂದಾಯಿತ ಪತ್ರ ಕಡ್ಡಾಯ ಮಾಡಿದ್ದು ಗ್ರಾಮಗಳಲ್ಲಿರುವ ಗ್ರಾಮಠಾಣಾ ಆಸ್ತಿ ಮಾಲೀಕರು ನೋಂದಾಯಿತ ದಾಖಲೆಗಳು | ಬಂದಿದೆ.<br><br>ಗ್ರಾಮಠಾಣಾ ಪ್ರದೇಶದ ಆಸ್ತಿಗಳಿಗೆ ಅಧಿಕೃತ ಹಕ್ಕು ದಾಖಲೆ ನೀಡುತ್ತಿರುವ ಪ್ರಕ್ರಿಯೆಯು |

| | | |
|---|---|---|
| | ಇಲ್ಲದೆ ಇ-ಖಾತಾ, ಬ್ಯಾಂಕ್ ಸಾಲ ಪಡೆಯಲು ಸ್ವತ್ತಿನ ಮಾರಾಟ ಮಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಎಲ್ಲಾ ಗ್ರಾಮಠಾಣಾ ಮಾಲೀಕರಿಗೆ ತುರ್ತಾಗಿ ಆಸ್ತಿ ಕಾರ್ಡ್ ನೀಡಲು ಸರ್ಕಾರ ಕೈಗೊಂಡ ಕ್ರಮವೇನು? | ಚಾಲ್ತಿಯಲ್ಲಿರುವುದರಿಂದ ಆಸ್ತಿಯ ಮೇಲೆ ಬ್ಯಾಂಕುಗಳು ಅಥವಾ ಇತರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಹಾಗೂ ಸ್ವತ್ತಿನ ಮಾರಾಟ ಮಾಡಲು ಅನುಕೂಲವಾಗುತ್ತದೆ. |

ಸಂಖ್ಯೆ: ಕಂಇ **56** ಎಸ್ ಎಸ್ ಸಿ **2026**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು